ತಂತಿ ವಿಳಾಸ: ಯೂನಿರಿಜ್
ದೂರವಾಣಿ ಸಂಖ್ಯೆ: 2419677/2419361

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್13/92/2023-24

ದಿನಾಂಕ:07.12.2024

## ಸುತ್ತೋಲೆ

ವಿಷಯ: ಲಾಂಛನದ ಬಳಕೆ ಕುರಿತು.
ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ರಾಜಕೀಯ) ಬೆಂಗಳೂರು ಇವರ ಪತ್ರ ಸಂಖ್ಯೆ:ಸಿಆಸುಇ 165 ರಾಸ 2024, ದಿನಾಂಕ:04.11.2024.

****

ಕರ್ನಾಟಕ ಸರ್ಕಾರದ ಅಧಿಕೃತ ಲಾಂಛನವು ಜನತೆಯ ಅಪಾರ ಗೌರವ ಮತ್ತು ವಿಶ್ವಾಸವನ್ನು ಹೊಂದಿರುತ್ತದೆ. ಇದರ ದುರ್ಬಳಕೆ ಅಥವಾ ಅಸಮರ್ಪಕ ಬಳಕೆ ಮಾಡುವುದನ್ನು ತಡೆಹಿಡಿಯುವುದು ಅತ್ಯಂತ ಮುಖ್ಯವಾಗಿರುತ್ತದೆ.

ಕರ್ನಾಟಕ ಸರ್ಕಾರದ ಅಧಿಕೃತ ಲಾಂಛನದ ದುರ್ಬಳಕೆ ಅಥವಾ ಅಸಮರ್ಪಕ ಬಳಕೆ ಮಾಡುವುದನ್ನು ಉಲ್ಲೇಖಿತ ಸುತ್ತೋಲೆಯಲ್ಲಿ ಕ್ರಮವಹಿಸುವಂತೆ ಸೂಚಿಸಿ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ.

ಕರ್ನಾಟಕ ರಾಜ್ಯ ಲಾಂಛನವನ್ನು The Emblems and Names (Prevention of Improper Use) Act, 1950ರ ಅನುಸೂಚಿಯ ಕ್ರಮ ಸಂಖ್ಯೆ: 4ರಲ್ಲಿ ಸೇರ್ಪಡೆಗೊಳಿಸಲಾಗಿದೆ. ಈ ಕಾಯ್ದೆಯ ಎಲ್ಲಾ ಉಪಬಂಧಗಳು ಹಾಗೂ The Emblems and Names (Prevention of Improper Use) Rules, 1982 ರಾಜ್ಯ ಲಾಂಛನಕ್ಕೂ ಅನ್ವಯವಾಗುತ್ತದೆ. ರಾಜ್ಯ ಲಾಂಛನದಲ್ಲಿ ಭಾರತದ ರಾಷ್ಟ್ರಲಾಂಛನವನ್ನು ಅಳವಡಿಸಿಕೊಂಡಿರುವುದರಿಂದ, The State Emblem of India (Prohibition of Improper Use) Act, 2005 ಹಾಗೂ The State Emblem of India (Regulation of Use) Rules, 2007 ಸಹ ಅನ್ವಯವಾಗುತ್ತದೆ.

ರಾಜ್ಯ ಲಾಂಛನವನ್ನು ಯಾವ ಯಾವ ಸಂದರ್ಭಗಳಲ್ಲಿ ಬಳಸಲು ಅವಕಾಶ ಇದೆಯೆಂದು ಹಾಗೂ ಯಾವ ವಿಧವಾದ ಬಳಕೆಯನ್ನು ನಿರ್ಬಂಧಿಸಲಾಗಿದೆ ಎಂಬುದನ್ನು ಮೇಲಿನ ಕಾಯ್ದೆಗಳಲ್ಲಿ ಹಾಗೂ ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ. ರಾಜ್ಯ ಲಾಂಛನವನ್ನು ಖಾಸಗಿ ಕಾರ್ಯಕ್ರಮಗಳಲ್ಲಿ ಬಳಸಿ ಸರ್ಕಾರದ ಕಾರ್ಯಕ್ರಮವೆಂಬಂತೆ ಬಿಂಬಿಸುವುದು, ನಿಯಮಗಳನುಸಾರ ರಾಜ್ಯ ಲಾಂಛನವನ್ನು ಬಳಸಲು ಅಧಿಕಾರವಿಲ್ಲದ ವ್ಯಕ್ತಿಗಳು/ಸಂಸ್ಥೆಗಳು ತಮ್ಮ ಪ್ರಕಟಣೆಗಳು, ಬ್ಯಾನರ್‌ಗಳು, ಪತ್ರಗಳು, ಜಾಹೀರಾತು, ಲೇಖನ ಸಾಮಗ್ರಿಗಳಲ್ಲಿ ಬಳಸುವುದು ಇತ್ಯಾದಿ ಅಸಮರ್ಪಕ ರೀತಿಯಲ್ಲಿ ಉಪಯೋಗಿಸಲು ಅವಕಾಶ ಇರುವುದಿಲ್ಲ.

ಮೇಲ್ಕಂಡ ಕಾಯ್ದೆಯಲ್ಲಿ ಹಾಗೂ ನಿಯಮಗಳಲ್ಲಿ ಉಪಬಂಧಿಸಿರುವ ರೀತಿಯನ್ನು ಹೊರತುಪಡಿಸಿ, ರಾಜ್ಯ ಲಾಂಛದ ದುರ್ಬಳಕೆ ಮಾಡುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದ್ದರಿಂದ, ರಾಜ್ಯ ಲಾಂಛನದ ಸಮರ್ಪಕ ಬಳಕೆಯ ಕುರಿತಾಗಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ The Emblems and Names (Prevention of Improper Use) Act, 1950 ಮತ್ತು The State Emblem of India (Prohibition of Improper Use) Act, 2005 ಹಾಗೂ ಇವುಗಳಡಿ ರಚಿಸಲಾದ ನಿಯಮಗಳಲ್ಲಿ ತಿಳಿಸಿರುವಂತೆ ರಾಜ್ಯ ಲಾಂಛನದ ದುರ್ಬಳಕೆಯಾಗದಂತೆ ಕ್ರಮವಹಿಸಲು ಸೂಚಿಸಲಾಗಿದೆ.

—೨—

Scanned with OKEN Scanner

ಆದ್ದರಿಂದ ಕರ್ನಾಟಕ ರಾಜ್ಯ ಸರ್ಕಾರದ ಛಾಂಛನ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಲಾಂಛನವನ್ನು ದುರ್ಬಳಕೆ ಹಾಗೂ ಅಸಮರ್ಪಕ ರೀತಿಯಲ್ಲಿ ಬಳಸದಿರಲು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಬಟವಾಡೆ ಅಧಿಕಾರಿಗಳು, ಘಟಕ ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕ ಮತ್ತು ಅಧ್ಯಾಪಕೇತರ ಉದ್ಯೋಗಿಗಳು, ಸಂಶೋಧನಾ

ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳ ಗಮನಕ್ಕೆ ಅಗತ್ಯವಾಗಿ ತರುವ ಸಂಬಂಧ ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಕುಲಸಚಿವ

ಗೆ:

1. ಕುಲಸಚಿವರು (ಪರೀಕ್ಷಾಂಗ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜನಾಧಿಕಾರಿಗಳು, ಮೈವಿವಿ.ನಿಲಯ,ಮೈಸೂರು.
4. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು.
5. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.

(3–6) ಅವಶ್ಯ ಕ್ರಮ ಕೈಗೊಳ್ಳುವುದು.

7. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,(ರಾಜಕೀಯ), ಬಹುಮಹಡಿ ಕಟ್ಟಡ ಬೆಂಗಳೂರು– ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಉಪ ಕುಲಸಚಿವರು(ಸಾಮಾನ್ಯ) ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಸಂಯೋಜಕರು, ಐ.ಸಿ.ಡಿ, ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–ಇವರಿಗೆ ಸರ್ಕಾರದ ಪತ್ರ ಹಾಗೂ ವಿಶ್ವವಿದ್ಯಾನಿಲಯದ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು.
10. ಮಾನ್ಯ ಕುಲಪತಿಯವರ/ಕುಲಸಚಿವರ ಆಪ್ತಸಹಾಯಕರು, ಮೈವಿವಿ.ನಿಲಯ ಮೈಸೂರು.
11. ಕಛೇರಿ ಪ್ರತಿ.

To: Mr. Karthik
to attend
17/12/2024

Scanned with OKEN Scanner